**ವಿದ್ಯಾರ್ಥಿ ಅಶಾಂತಿ : ಕಾರಣ – ಪರಿಹಾರ**

'ವಿದ್ಯಾರ್ಥಿ' ಎಂದರೆ ವಿದ್ಯೆಯನ್ನು ಹುಡುಕುವವ ಅಥವಾ ಕಲಿಯುವವ (ವಿದ್ಯಾ–ವಿದ್ಯೆಯನ್ನು, ಅರ್ಥಿ–ಯಾಚಿಸುವವನು). ಮನುಷ್ಯ ಜನ್ಮ ತಳೆದ ದಿನದಿಂದಲೂ ವಿದ್ಯಾರ್ಥಿಯೇ. ಅವನು ಸಾಯುವವರೆಗೂ ಏನಾದರೊಂದು ಕಲಿಯುತ್ತಲೇ ಇರುತ್ತಾನೆ. ಆದರೂ ಸಹ ಮನುಷ್ಯನು ಜೀವನದಲ್ಲಿ ಒಂದು ನಿಶ್ಚಿತ ಅವಧಿಯನ್ನು ಕಲಿಯುದಕ್ಕೆ ಮೀಸಲಿಡುತ್ತಾನೆ. ಹೀಗೆ ಮೀಸಲಾಗಿಟ್ಟ ಕಾಲವೇ ವಿದ್ಯಾರ್ಥಿ ದೆಸೆ. ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವ ಅತ್ಯಂತ ಪ್ರಮುಖವಾದ ದೆಸೆ ಇದು. ಜೀವನದ ದಿಕ್ಕನ್ನು ಬದಲಿಸಿ ಭಾವನೆಗಳಿಗೆ ರೂಪ ಕೊಡುವ ಒಂದು ಕಾಲ. ಈ ಕಾಲವು ಮನುಷ್ಯನ ಭವಿಷ್ಯತ್ತನ್ನು ರೂಪಿಸುವ ಒಂದು ಪ್ರಶಸ್ತವಾದ ಅವಧಿ. ಈ ಕಾಲದಲ್ಲಿ ವಿದ್ಯಾರ್ಥಿಯ ಮನಸ್ಸು ಚಾಂಚಲ್ಯದಿಂದ ಕೂಡಿರುತ್ತದೆ. ಈ ವಯಸ್ಸಿನಲ್ಲಿ ಸದ್ಭಾವನೆಗಳು ಯಾ–ದುರ್ಭಾವನೆಗಳು ಪರಿಸರವನ್ನನುಸರಿಸಿ ಬೆಳೆಯುತ್ತದೆ. ಇದರಿಂದ ನೆಮ್ಮದಿಗೆ ಭಂಗ ಬಂದು ವಿದ್ಯಾರ್ಥಿಯು ಅಸಂತೃಪ್ತನಾಗಬಹುದು. ಇದೇ ವಿದ್ಯಾರ್ಥಿಯಲ್ಲಿನ ಅಶಾಂತಿ ಎಂದು ಗುರುತಿಸುವುದು.

ಭಾರತೀಯ ವಿದ್ಯೆಯಲ್ಲಿ ಮುಕ್ತಿಯೇ ಪರಮೋಚ್ಚ ಗುರಿ.ಐಹಿಕ ವಿಷಯ ಜ್ಞಾನಕ್ಕೆ ಎರಡನೆಯ ಸ್ಥಾನ.ಆದರೆ ಈಗ ಐಹಿಕ ವಿಷಯ ಜ್ಞಾನವೇ ವಿದ್ಯೆಯ ಪರಮೋಚ್ಚ ಗುರಿಯಾಗಿದೆ. ಆದ ಕಾರಣ ವಿದ್ಯಾರ್ಥಿಯಲ್ಲಿ ಐಹಿಕ ಜ್ಞಾನವೇ ತುಂಬ ಅಶಾಂತಿಗೆ ಎಡೆಮಾಡಿದೆ. ಚರ್ಚಿಲ್ಲರು ಹೇಳಿದಂತೆ ' ಯುದ್ಧ ಮನುಷ್ಯನ ಮನಸ್ಸಿನಲ್ಲಿ ಆರಂಭವಾಗುತ್ತದೆ. ಅದರಂತೆಯೇ ಇಂದು ಪ್ರತಿಯೊಬ್ಬ ವಿದ್ಯಾರ್ಥಿಯ ಮನದಲ್ಲೂ ಅಶಾಂತಿ ನಿರ್ಮಾಣವಾಗುತ್ತಿದೆ. ಅಶಾಂತಿಯ ಅಲೆ ಬೀಸಿ ಇಡೀ ವಿದ್ಯಾರ್ಥಿ ಸಮುದಾಯಕ್ಕೆ ಪಸರಿಸುತ್ತಿದೆ.

ಇಂದಿನ ವಿದ್ಯಾರ್ಥಿಯ ಮನಸ್ಸು ಏಕಿಷ್ಟು ಅಶಾಂತವಾಗಿದೆ? ಯಾವ ಕಾರಣದಿಂದ ವಿದ್ಯಾರ್ಥಿಯು ಇಂದು ತನ್ನ ಮುಖ್ಯ ಗುರಿಯಾದ ಜ್ಞಾನಾರ್ಜನೆಯನ್ನು ಬಿಟ್ಟು ಗಲಭೆ ಹಾಗೂ ಹಿಂಸೆಗಳಲ್ಲಿ ತೊಡಗಿದ್ದಾನೆ? ಈ ಪ್ರಶ್ನೆಗಳನ್ನು ಕೇಳಿದಾಗ, ನಮ್ಮ ಸಮಾಜದಲ್ಲಿರುವ ಅನೇಕ ನ್ಯೂನತೆಗಳೇ ಕಾರಣ ಎಂಬುದು ನಮಗೆ ಮನದಟ್ಟಾಗುತ್ತದೆ. ವಿದ್ಯಾರ್ಥಿಯಲ್ಲಿನ ಅಶಾಂತಿಗೆ ಮುಖ್ಯ ಕಾರಣಗಳೆಂದರೆ

(೧) ಜ್ಞಾನಾರ್ಜನೆಯ ಬದಲು ಧನಾರ್ಜನೆಯ ಬಗ್ಗೆ ಆಸಕ್ತಿ.

(೨) ರಾಜಕೀಯ ವ್ಯವಸ್ಥೆ.

(೩) ಆಧುನೀಕರಣವೆಂಬ ಭ್ರಾಂತು.

(೪) ಪರೀಕ್ಷಾ ಪದ್ಧತಿ.

(೫) ಸತ್ವರಹಿತ ಪಠ್ಯಕ್ರಮ.

(೬) ವಿದ್ಯಾರ್ಥಿಯ ದೃಷ್ಟಿಕೋನ.

*ಜ್ಞಾನಾರ್ಜನೆಯ ಬದಲು ಧನಾರ್ಜನೆಯ ಬಗ್ಗೆ ಆಸಕ್ತಿ*

ಸಮಾಜದಲ್ಲಿ ಎಲ್ಲಿ ನೋಡಿದರೂ ಧನಾರ್ಜನೆಗೆ ಜನ ಏನೆಲ್ಲಾ ಮಾಡಲು ಸಿದ್ದರಿದ್ದಾರೆ. ಮನೆಯಲ್ಲಿಯೂ ಧನಾರ್ಜನೆಯದೇ ಯೋಚ(ಜ)ನೆ. ಹೊರಗಡೆಯೂ ಇದೇ ಪರಿಸರ. ಶಾಲಾಕಾಲೇಜಿನಲ್ಲಿಯೂ ಅಧ್ಯಾಪಕರಿಂದಲೂ ಇದೇ ಪಾಠ. ಇದು ವಿದ್ಯಾರ್ಥಿಗೆ ಅಪಾಯಕಾರಿ. ಅವನ ಮನಸ್ಸಿನ ಮೇಲೆ ಈ ಸಮಸ್ಯೆ

ಅಚ್ಚಳಿಯದೇ ಉಳಿಯುತ್ತದೆ (ಉಳಿದಿದೆ). ಏನು ಮಾಡಿಯಾದರೂ ಧನಾರ್ಜನೆ ಮಾಡಬೇಕೆಂಬ ಭಾವನೆ ಅವನಲ್ಲಿ ಬೆಳೆಯುತ್ತದೆ. ಇದು ವಿದ್ಯಾರ್ಥಿ ಅಶಾಂತಿಗೆ ಮುಖ್ಯ ಕಾರಣವಾಗಿದೆ.

### *ಭ್ರಷ್ಟ ರಾಜಕೀಯ ವ್ಯವಸ್ಥೆ*

ನಮ್ಮ ದೇಶದ ಭ್ರಷ್ಟ ರಾಜಕೀಯ ವ್ಯವಸ್ಥೆಯು ವಿದ್ಯಾಲಯಗಳನ್ನೂ ಇಂದು ಪ್ರವೇಶಿಸಿದೆ. ರಾಜಕೀಯ ವ್ಯಕ್ತಿಗಳ ಪ್ರಭಾವ, ರಾಜಕೀಯ ಶಕ್ತಿಗಳ ಕಪಿಮುಷ್ಠಿ ಇವುಗಳ ಮಧ್ಯೆ ವಿದ್ಯಾರ್ಥಿಯು ಸಿಕ್ಕಿ ನರಳುತ್ತಿದ್ದಾನೆ. ಯುನಿಯನ್ ಚುನಾವಣೆಯ ಹೆಸರಿನಲ್ಲಿ ಗದ್ದುಗೆಗೆ ಗುದ್ದಾಟ, ಹೋರಾಟ, ವಿದ್ಯಾರ್ಥಿಯ ಮನವನ್ನು ಕದಡುತ್ತದೆ. ರಾಜಕೀಯ ಪುಡಾರಿಗಳು ವಿದ್ಯಾರ್ಥಿಗಳಾನ್ನು ಬಳಸುತ್ತಿದ್ದಾರೆ.

### *ಆಧುನೀಕರಣದ ಸೋಗು*

ಆಧುನೀಕರಣದ ಸೋಗಿನಲ್ಲಿ ವಿದ್ಯಾರ್ಥಿಗಳಿಂದು ಕುರುಡರಾಗಿ ಪಾಶ್ಚಾತ್ಯರನ್ನು ಅನುಕರಣೆ ಮಾಡುತ್ತಿದ್ದಾರೆ. ಹಿಂದೂ ವಿಚಾರ ತತ್ವಗಳನ್ನು ಕೀಳಾಗಿ ಕಾಣುವುದು ಹೆಚ್ಚಾಗಿದೆ. ಇದು ವಿದ್ಯಾರ್ಥಿಯ ಸದ್ಗುಣ, ಸದ್ಭಾವನೆಗಳಿಗೆ ಮಸಿ ಬಳಿಯುತ್ತಿದೆ ಹಾಗೂ ಅವನ ಮನೋಬಲವನ್ನು ಕುಗ್ಗಿಸುತ್ತಿದೆ.

### *ಸತ್ತ್ವರಹಿತ ಪಠ್ಯಕ್ರಮ*

ಈಗಿನ ನಮ್ಮ ಪಠ್ಯಕ್ರಮ ವ್ಯಕ್ತಿತ್ವ ರೂಪಿಸುವಂತಹುದಾಗಲೀ, ಕುತೂಹಲ ಕೆರಳಿಸುವಂತಹುದಾಗಲೀ, ಆಸಕ್ತಿಯನ್ನುಂಟು ಮಾಡುವಂತಹುದಾಗಲಿ, ಅಲ್ಲವೇ ಅಲ್ಲ. ಕೆಲವು ಬಾರಿ ಅರ್ಥವಾಗದ ಪರಸ್ಪರ ಸಂಬಂಧ ಇರದ, ಸರಕಾರ ನಡೆಸುವ ಆಡಳಿತ ಪಕ್ಷದ ಇಷ್ಟಾನು ಸಾರವಾಗಿ ಈ ಪಠ್ಯಕ್ರಮವು ರಚಿತವಾಗಿರುತ್ತದೆ. ಈ ರೀತಿಯ ಪಠ್ಯಕ್ರಮವು ವಿದ್ಯಾರ್ಥಿಯಲ್ಲಿನ ಆಸಕ್ತಿಯನ್ನು ಹಿಂಗಿಸಿ ಅಶಾಂತಿಗೆ ಕಾರಣಾವಾಗಿದೆ.

### *ಪರೀಕ್ಷಾ ಪದ್ಧತಿ*

ಪರೀಕ್ಷೆ, ವಿದ್ಯಾರ್ಥಿಯ ಬಾಳನ್ನು ರೂಪಿಸುತ್ತದೆ. ಪರೀಕ್ಷೆಯ ಅವಧಿಯ ಅಚಾನಕ ವಿಸ್ತರಣೆ, ಅದನ್ನು ತತ್ ಕ್ಷಣ ಮೊಟಕುಗೊಳಿಸುವುದು, ಕೆಲವು ದಿನಗಳಲ್ಲೇ ಮತ್ತೊಂದು ನಿರ್ಧಾರ ತೆಗೆದುಕೊಳ್ಳುವುದು, ಅಂಕಗಳ ವಿತರಣೆಯಲ್ಲಿ ಸಮರ್ಪಕತೆ ಇಲ್ಲದಿರುವುದು, ತಪಾಸಣೆ ಬೇಜವಾಬ್ದಾರಿಯಿಂದ ಮಾಡುವುದು ಇತ್ಯಾದಿಗಳು ಪರೀಕ್ಷಾ ಪದ್ಧತಿಯನ್ನು ವಿದ್ಯಾರ್ಥಿ ತಿರಸ್ಕಾರದಿಂದ ಕಂಡು ಬಹಿಷ್ಕರಿಸುವುದೇ ಉತ್ತಮವೆಂದು ಭಾವಿಸುವಂತಾಗಿದೆ.

### *ವಿದ್ಯಾರ್ಥಿಯಲ್ಲಿನ ದೃಷ್ಟಿಕೋನ*

ವಿದ್ಯೆಯ ಬಗ್ಗೆ ಈಗಿನ ವಿದ್ಯಾರ್ಥಿಗಳಿಗೆ ಅತಿ ಕೆಟ್ಟ ದೃಷ್ಟಿಕೋನವಿದೆ. ಕಾಲೇಜುಗಳಿಗೆ ಬರುವುದೇ ಸ್ವಚ್ಛಂದವಾಗಿ ವಿಹರಿಸುವುದಕ್ಕಾಗಿ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಹೆಚ್ಚು. ಕೆಲವೊಮ್ಮೆ ಸಹಶಿಕ್ಷಣ (ಕೊ–ಎಜುಕೇಷನ್)ವೂ ವಿದ್ಯಾರ್ಥಿಗಳಿಗೆ ಕೀಳು ಅಭಿರುಚಿಗಳನ್ನು ನಿರ್ಮಿಸುತ್ತದೆ. ವಿದ್ಯೆಯ ಮೇಲಿದ್ದ ಪೂಜ್ಯ ಭಾವನೆ, ವಿದ್ಯಾಗುರುಗಳ ಮೇಲಿದ್ದ ಆದರ, ಗೌರವ ಭಾವನೆಗಳು ಇಲ್ಲವಾಗಿದೆ. ಗುರುಶಿಷ್ಯರ ಬಾಂಧವ್ಯವೂ ಕೊಚ್ಚಿಹೋಗಿದೆ. ಮೀಸಲಾತಿ ಪದ್ಧತಿ ಹಲವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅತೃಪ್ತಿಯನ್ನೂ, ಅಶಾಂತಿಯನ್ನು ಉಂಟುಮಾಡಿದೆ. ಅವರ ಪ್ರತಿಭೆಗೆ ಯಾವುದೇ ಪುರಸ್ಕಾರವಿಲ್ಲವೆಂದು ಅರಿತು ಖಿನ್ನರಾಗಿದ್ದಾರೆ.

**–:ಪರಿಣಾಮಗಳು:–**

ವಿದ್ಯಾರ್ಥಿ ಜೀವನದಲ್ಲಿ ಅಶಾಂತಿ ಒಂದು ಬಿರುಗಾಳಿ. ಅಶಾಂತ ವಿದ್ಯಾರ್ಥಿ ತನಗೆ ತಾನೇ ಮಾರಕವಾಗುತ್ತಾನೆ. ಅಶಾಂತ ವಿದ್ಯಾರ್ಥಿಯು ತನ್ನ ಮಾನಸಿಕ ಅಶಾಂತಿಯಿಂದಾಗಿ ತನ್ನ ಬಾಳನ್ನೇ ಬಲಿ ಕೊಟ್ಟ ವಿದ್ಯಾರ್ಥಿಗಳೆಷ್ಟೋ? ಇದು ವಿದ್ಯಾರ್ಥಿಗಳ ಸಮುದಾಯಕ್ಕೆ ಹೊಸತೇನಲ್ಲ, ಅಶಾಂತ ವಿದ್ಯಾರ್ಥಿ ಸಮಾಜಕ್ಕೆ ಒಂದು ಸಮಸ್ಯೆಯಾಗುತ್ತಾನೆ.

***ಪ್ರತಿಭಾನ್ವಿತರ ಕೊರತೆ***

ಮೀಸಲಾತಿಯಿಂದ, ಪ್ರತಿಭಾನ್ವಿತರಾಗಿ ಮುಂದೆ ಬರಲು ಯೋಗ್ಯರಾದ ವಿದ್ಯಾರ್ಥಿಗಳು ಅಸಂತೃಪ್ತರಾಗಿ ವಿಭಿನ್ನ ಮಾರ್ಗ ಹಿಡಿಯಬೇಕಾಗುತ್ತದೆ. ಯಾವ ರಂಗದಲ್ಲಿಯೂ ವಿದ್ಯಾರ್ಥಿಗಳ ಪ್ರತಿಭೆಯನ್ನು ಪುರಸ್ಕರಿಸಲು ಆಗುವುದಿಲ್ಲ. ಭಾರತಕ್ಕೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾಯಕರು, ದಕ್ಷ ಆಡಳಿತಗಾರರು ಸಿಗುವುದಿಲ್ಲ. ಉದಾ : ಸೈನಿಕನಾಗಿ ಹೋರಾಡಲು ಇಚ್ಛೆಯಿಂದ ಒಬ್ಬ ವಿದ್ಯಾರ್ಥಿ, ಉಪಾಧ್ಯಾಯ ವೃತ್ತಿಯನ್ನು ಹಿಡಿಯುವ ನಿರ್ಧಾರ ಮಾಡಬೇಕಾದವನು, ನಿರ್ಮಾಣ ಮಾಡಬೇಕಾದ ಸ್ಥಳದಲ್ಲಿ ಏನು ತಾನೇ ಮಾಡಬಲ್ಲ?

***ಬೇಜವಾಬ್ದಾರಿ ಪ್ರಜೆ***

ವಿದ್ಯಾರ್ಥಿ ಜೀವನದಲ್ಲಿಯೇ, ಬೇಸರಗೊಂಡವರು ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಸರಿಯಾದ ಪ್ರಜೆಯಾಗಿ ಮುಂದುವರೆಯಲಾರರು. ಸರ್ಕಾರಿ ಚುನಾವಣೆ ಮುಂತಾದ ನಿರ್ಣಾಯಕ ಸಂಗತಿಗಳಿಗೂ ಇವರು ಬೆಂಬಲ ಕೊಡುವುದಿಲ್ಲ. ಹೀಗಾಗಿ ಅಭಿಮಾನಶೂನ್ಯ ದೇಶಭ್ರಷ್ಟ ಹಾಗೂ ರಾಷ್ಟ್ರಕ್ಕೆ ಕಳಂಕ ತರುವ ಜನರಾಗಿ ವಿದ್ಯಾರ್ಥಿಗಳು ಬೆಳೆಯುವರು.

***ಮುಷ್ಕರಗಳು***

ಶಾಂತ ರೀತಿಯಿಂದ ಗಾಂಧಿತತ್ವ ಹಿಡಿದು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮುಷ್ಕರಗಳನ್ನು ಹೂಡುವುದು ಈಗ ಮಾಯವಾಗಿದೆ. ಕಲ್ಲು, ಚಾಕು, ಚೂರಿ, ಚೈನುಗಳ ಸಂಸ್ಕೃತಿ ಈಗ ವಿದ್ಯಾರ್ಥಿ ಸಮುದಾಯಕ್ಕೆ ಕಾಲಿಟ್ಟಿದೆ. ನೈತಿಕ ಮೌಲ್ಯಗಳನ್ನು ಕಳೆದುಕೊಂಡ ವಿದ್ಯಾರ್ಥಿಗಳು ಕೊಲೆ, ಸುಲಿಗೆಗಳಿಗೆ ಇಳಿಯುತ್ತಿದ್ದಾರೆ. ಈ ಸಮಾಜದಲ್ಲಿರುವ ಅನೇಕ ಸಮಸ್ಯೆಗಳಿಗೆ ಈಗ ವಿದ್ಯಾರ್ಥಿಯೇ ಕಾರಣನಾಗಿದ್ದಾನೆ. ಇದು ದೇಶ ಬೆಳವಣಿಗೆಗೆ ಮಾರಕವಲ್ಲದೇ ಮತ್ತೇನು?

Jan 23rd 1994 Hosa Diganta Vidhyarthi Ashanthi-Karana-Parihara.